CC 314/2015 PW-7
Date: 06-03-2026

**ಪಾಟೀಸವಾಲು:** ಆರೋಪಿ ಪರ ಶ್ರೀ ಆರ್ ಎಂ ವಕೀಲರಿಂದ:

ಆರೋಪಿತರು ಹಣ ದುರುಪಯೋಗ ಪಡಿಸಿದ ಬಗ್ಗೆ ನನಗೆ 2013 ರಲ್ಲಿ ಗಮನಕ್ಕೆ ಬಂದಿದೆ. ಮೊತ್ತವನ್ನು ಬಳಕೆ ಮಾಡಿರುವ ಬಗ್ಗೆ ನಮ್ಮ ಅಧಿಕಾರಿಗಳು ಹೋದ ನಂತರ ಗೊತ್ತಾಗಿರುವುದರಿಂದ ದೂರನ್ನು ಸಲ್ಲಿಸಲು ತಡ ಆಗಿರುತ್ತದೆ. ದೂರನ್ನು ಸಲ್ಲಿಸಲು 2 ವರ್ಷಗಳ ಕಾಲ ತಡವಾಗಿದೆ. ನಮ್ಮ ಅಧಿಕಾರಿ ಶಿಕ್ಷಣ ಸಂಯೋಜಕರು, ಕ್ಷೇತ್ರ ಸಮನ್ವಯ ಅಧಿಕಾರಿ ಮತ್ತು BRP (Block resource person), CRP (Cluster resource person) ಹಾಗೂ JEE ಇರುತ್ತಾರೆ. ಇವರೆಲ್ಲಾರು ಸನ್ 2013 ರಲ್ಲ್ ಫೀಲ್ಡ್ ಗೆ ಹೋಗಿ ನಮ್ಮ ಶಾಲೆಯಲ್ಲಿ ಕಟ್ಟಡ ಪ್ರಗತಿ ಕಾರ್ಯವನ್ನು ಪರಿಶೀಲಿಸಲಾಗಿ ಅದರ ಪ್ರಕಾರ ಹಣ ಎಷ್ಟು ಸೆಳೆದಿದ್ದಾರೆ ಎಂದು ನೋಡಿದ್ದಾರೆ. ಸಾಕ್ಷಿಯು ಮುಂದುವರೆದು ಹಣ ಸೆಳೆದಿದ್ದು ಮತ್ತು ಅಲ್ಲಿರುವ ಕೆಲಸಕ್ಕೆ ವ್ಯತ್ಯಾಸ ಕಂಡುಬರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನನಗೆ ವರದಿ ನೀಡಿದರು. ಸದರಿ ವರದಿಯ ಆಧಾರದ ಮೇಲೆ ನಾನು ಈ ದೂರನ್ನು ಸಲ್ಲಿಸಿರುತ್ತೇನೆ. ಸದರಿ ವರದಿಯವ ಪ್ರತಿಯನ್ನು ನಾನು ಪೋಲೀಸರಿಗಾಗಲಿ ಅಥವಾ ನ್ಯಾಯಾಲಯಕ್ಕಾಗಲಿ ಸಲ್ಲಿಸಿಲ್ಲ. ನಮ್ಮ ಮೇಲಧಿಕಾರಿಗಳು ಯಾವುದೇ ವರದಿಯನಲ್ಲು ಕೊಟ್ಟಿಲ್ಲ ಎಂದರೆ ಸರಿಯಿಲ್ಲ. ನಮಗೆ ಯಾವುದೇ ಹಣ ದುರುಪಯೋಗ ಆಗಿಲ್ಲ ಎಂದು ವರದಿ ನೀಡಿದ್ದರೂ ಸಹ ಅದನ್ನು ಮುಚ್ಚಿಟ್ಟಿ ಈ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಿಲ್ಲ. ನಾನು ಸಂಬಂದ ಪಟ್ಟ ಮುಖ್ಯೋಪಾದ್ಯಪಕ ಮತ್ತು ಎಸ್ 3 ಎಂ ಸಿ ಅಧ್ಯಕ್ಷರಿಗೆ ಕೊಟ್ಟಿರುವ ನೋಟೀಸು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ನೋಟೀಸು ಹೇಗೆ ಕಳುಹಿಸಿರುತ್ತೇನೆ ನೆನಪಿಲ್ಲ. ನಾನು ಯಾವುದೇ ರೀತಿಯ ನೋಟೀಸನ್ನು ಕೊಟ್ಟಿಲ್ಲ ಎಂದರೆ ಸರಿಯಿಲ್ಲ. ನೋಟೀಸು ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.20-01-2014 ರಂದು ಪೋಲೀಸರು ನಮಗೆ ಪತ್ರ ಬರೆದು ಸಂಬಂದ ಪಟ್ಟ ದಾಖಲಾತಿಯನ್ನು ಕೇಳಿದರು. ಆಗ ನಾನು JEE ರವರು ನೀಡಿರುವ ವರದಿ ಮತ್ತು ಅಧಿಕಾರಿಗಳ ವರದಿಯನಉನ ನೀಡಿರುತ್ತೇನೆ. ಮೇಲೆ ಹೇಳಿರುವ ಅಧಿಕಾರಿಯವರ ವರದಿಯನ್ನು ನೀಡಿರುತ್ತೇನೆ ಎಂದರೆ ಸರಿ. ರೂ.6,06,078/- ಹಣ ದುರುಪಯೋಗ ಪಡಿಸಿದರು. ನಮ್ಮ ಮೇಲಧಿಕಾರಿಗಳು ಆರೋಪಿತರ ವಿರುದ್ದ ದೂರನ್ನು ಸಲ್ಲಿಸಲು ಯಾವುದೇ ಪತ್ರವನ್ನು ಕೊಟ್ಟಿಲ್ಲ. ಸಾಕ್ಷಿಯು ಮುಂದುವರೆದು ಅದು ನಮ್ಮ ಕರ್ತವ್ಯದ ಭಾಗವಾಗಿದೆ ಎಂದು ನುಡಿಯುತ್ತಾರೆ. ನಿ ಪಿ 8

ರಂತೆ ರೂ.5,35,454.15/- ದುರುಪಯೋಗ ಪಡಿಸಿಕೊಂಡ ಬಗ್ಗೆ ನಮೂದಿಸಲಾಗಿದೆ ಎಂದರೆ ಸರಿ. ಇದರ ಬಗ್ಗೆ audit report ಮಾಡಿಲ್ಲ. ಸಾಕ್ಷಿಯು ಮುಂದದುವರೆದು JEE ರವರು ನೀಡಿದ ವರದಿಯ ಮೇಲೆ ದೂರನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಯೋಜನೆಯಲ್ಲಿ ಒಟ್ಟು ರೂ.11,00,375/- ಹಣವು ಮಂಜೂರಾತಿಯಾಗಿತ್ತು. ಮಂಜೂರಾಗಿದ್ದ ಹಣದ ಬಗ್ಗೆ ನಿ ಪಿ 8 ರಲ್ಲಿ ನಮಾದಿಸಿಲ್ಲ. JEE ರವರ ವರದಿಯ ಆಧಾರದ ಮೇಲೆ ನಾನು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿ. JEE ರವರು ನಮ್ಮ ಆಡಳಿತದಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಾಂಟ್ರಾಕ್ಟ್ ಬೆಸಿಸ್ ಮೇಲೆ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. JEE ರವರನ್ನು ಹೊರತು ಪಡಿಸಿ ಬೇರೆ ವ್ಯಕ್ತಿಕಡೆಯಿಂದ ನಾನು ಯಾವುದೇ ಪರೀಶೀಲನೆ ಮಾಡಿಲ್ಲ ಹಾಗೂ audit report ನ್ನು ಮಾಡಿಲ್ಲ ಎಂದರೆ ಸರಿ. ಯಾವುದೇ ಕೆಲಸ ಸರಿಯಾಗಿ ಮಾಡಿದ್ದಾರೋ ಅಥವಾ ಇಲ್ಲ ಎಂದು ತಿಳಿದುಕೊಳ್ಳಲು ಸರ್ಕಾರ ರವರು ಬೇರೇ ವ್ಯಕ್ತಿಯವರಿಂದ ತಪಾಸಣೆ ಮಾಡುತ್ತಾರೆ ಎಂದರೆ ಸರಿ. ಸದರಿ ತಪಾಸಣೆಯಲ್ಲಿ ಕಟ್ಟಡ ಯೊಗ್ಯತೆಯ ಬಗ್ಗೆ, ಹಣ ಖರ್ಚು ಆಗಿರುವ ಬಗ್ಗೆ ಮತ್ತು ದುರುಪಯೋಗಪಡಿಸಿರುವ ಬಗ್ಗೆ ತಪಾಸಣೆ ಮಾಡಿಸುತ್ತಾರೆ ಎಂದರೆ ಸರಿ. ನಿ ಪಿ 3 ರಿಂದ 5 estimate ಗಳು ಯಾವ ಶಾಲೆಗೆ ಸಂಬಂಧಿಸಿದೆ ಮತ್ತು ಯಾವ ಊರಿಗೆ ಸಂಬಂಧಿಸಿದೆ ಎಂಬುದರ ಕುರಿತು ಅದರಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯು estimate ವಿವರ ಎಲ್ಲಾ ಶಾಲೆಗಳಿಗೆ ಕಾಮನ್ ಆಗಿ ಇರುತ್ತದೆ ಎಂದು ನುಡಿಯುತ್ತಾರೆ. ಯಾವ ಶಾಲೆಗಳಿಗೆ ಎಷ್ಟು ಹಣ ಬಿಡುಗಡೆ ಯಾಗಿದೆ ಅದರ ಬಗ್ಗೆ ಕವರಿಂಗ್ ಲೆಟರ್ ಇರುತ್ತದೆ ಎಂದರೆ ಸರಿಯಿಲ್ಲ. ಯಾವ ಶಾಲೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದರ ಬಗ್ಗೆ ಸರ್ಕಾರ ಶಾಲೆಗಳ ಪಟ್ಟಿ ಮಾಡಿ ಅದರ ಮುಂದೆ ಬಿಡುಗಡೆಯಾದ ಹಣವನ್ನು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಟ್ಟಿಯನ್ನು ನಾನು ಪೋಲೀಸರಿಗಾಗಲಿ ಅಥವಾ ನ್ಯಾಯಾಲಯಕ್ಕಾಗಲಿ ಹಾಜರು ಪಡಿಸಿಲ್ಲ. ಪ್ರತಿಯೊಂದು ಶಾಲೆಗಳಿಗೆ ಪ್ರತ್ಯೆಕವಾಗಿ estimate ಮಾಡುತ್ತಾರೆ ಎಂದರೆ ಸರಿಯಿಲ್ಲ.

ಯಾವುದೇ ಕಟ್ಟಡದಲ್ಲಿ ಅಥವಾ ಕೆಲಸದಲ್ಲಿ ಎಷ್ಟು ಹಣ ದುರುಪಯೊಗ ಪಡಿಸಿದ್ದಾರೆ ಅದರ ಬಗ್ಗೆ ಕೆಲಸ ಸಂಪೂರ್ಣವಾಗಿ ಮುಕ್ತಾಯವಾದ ನಂತರ ಗೊತ್ತಾಗುತ್ತದೆ ಎಂದರೆ ಸಾಕ್ಷಿಯು ಹಂತ ಹಂತ ವಾಗಿ ಹಣ ಬಳಕೆಗಾಗಿ ನಿರ್ದೇಶನ ಇರುತ್ತದೆ. ಬಿಡುಗಡೆಯಾದ ಒಟ್ಟು ಮೊತ್ತ ರೂ.11,00,375/- ನೇರವಾಗಿ SDMC ಅಧ್ಯಕ್ಷ ಮತ್ತು ಮುಖೋಪಾಧ್ಯಯರವರ ಜಂಟಿ ಬ್ಯಾಂಕ್ ಖಾತೆಗೆ ಜಮಾ

ಆಗುತ್ತದೆ. ಬ್ಯಾಂಕ್ ಖಾತೆ SDMC ಅಧ್ಯಕ್ಷ ಮತ್ತು ಮುಖೋಪಾಧ್ಯಯರವರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ನಾನು ಆರೋಪಿತರಿಗೆ ಸತಾಯಿಸ ಬೇಕು ಎಂಬ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ರೂ.11,00,000/- ಗಳನ್ನು ದುರುಪಯೋಗ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಆರೋಪಿತರು ಯಾವುದೇ ಹಣವನ್ನು ದುರುಪಯೋಗ ಪಡಿಸಿಲ್ಲ ಎಂದರೆ ಸರಿಯಿಲ್ಲ. ನಿ ಪಿ 3 ರಿಂದ 5 ದಾಖಲಾತಿಗಳು JEE ರವರು ನನ್ನ ಆಡಳಿತದಲ್ಲಿ ಕೆಲಸ ಮಾಡಿರುವುದರಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಸಿ ಕೊಟ್ಟಿರುತ್ತಾರೆ ಎಂದರೆ ಸರಿಯಿಲ್ಲ. ಮುಂಜೂರಾತಿಯ ಹಣವನ್ನು ಅಧ್ಯಕ್ಷರು ಮತ್ತು ಮುಖ್ಯೋಪಾಧ್ಯಪಕರ ಜಂಟಿ ಖಾತೆಗೆ ಜಮಾ ಆಗಿರುವ ಬಗ್ಗೆ ನಾನು ನೋಡಿಲ್ಲ. ನಿ ಪಿ 2 ಪೊಟೋ ಪೋಲೀಸ್ ಇಲಾಖೆಯವರು ತೆಗೆದಿರುತ್ತಾರೆ. ನಿ ಪಿ 2 ರಲ್ಲಿ ಕಟ್ಟಡ ಆಟ ಚತ್ತು ಬಿದ್ದಿರುವ ಬಗ್ಗೆ ಕಾಣುತ್ತಿದೆ ಎಂದರೆ ಸರಿ. ಆರೋಪಿತರು ಎಲ್ಲಾ ಕೆಲಸವನ್ನು ಮಾಡಿದ್ದರು ಸಹಅ ವರ ವಿರುದ್ದ ಸಳ್ಳು ದೂರನ್ನು ಸಲ್ಲಿಸಿಲ್ಲ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

Accused present. CW.1 is present and examined as PW-1 got marked Ex.P.1 and P1(a).

Prayer of the learned APP to summon other witnesses is rejected as material witnesses have turned hostile.

Sec.313 statement of the accused is dispensed with as there is no incriminating evidence.

Heard the learned APP and the counsel for the accused.

**For judgment by 15-05-2025.**